ಕರ್ನಾಟಕ

ಲ್ಲಾ ವಿಶೇಷ




ಪುಟ 6 ಸಂಯುಕ್ತ ಕರ್ನಾಟಕ. 6-12-2001



# ಗೌರೀಶ ಕಾಯ್ಕಿಣಿ ಅಂಕಣ

ಗೊತ್ತಿರದ ಸಂಗತಿಗಳ ಕುರಿತು ಪರಿಚಯ ಮಾಡಿಕೊಡುವುದು ತುಸು ಕಠಿಣ. ಆದರೆ ಅದಕ್ಕೂ ಹೆಚ್ಚು ಕಠಿಣ ಕೆಲಸ ಗೊತ್ತಿದ್ದ ಸಂಗತಿಗಳ ಬಗ್ಗೆ ಪರಿಚಯ ಮಾಡಿಕೊಡುವದು. ಯಾಕೆಂದರೆ ಗೊತ್ತಿದ್ದ ಸಂಗತಿಗಳ ಬಗ್ಗೆ ನಮಗೆ ನಿಜವಾಗಿಯೂ ಅಷ್ಟೇನೂ ಗೊತ್ತಿರುವದಿಲ್ಲ. ಎಷ್ಟೋ ಸಲ ಗೊತ್ತಾದ ವಿವರಗಳೂ ಅತಿಶಯೋಕ್ತಿಯಾಗಿರುತ್ತವೆ. Things are not what they see.

ಕಂಡದ್ದು ಕಂಡಂತೆಯೇ ಇರುವುದೂ ಇಲ್ಲ. ಈ ರೀತಿ ನಮ್ಮ ಗೋಕರ್ಣ ಒಂದು ಸುಪ್ರಸಿದ್ಧ ಸಿದ್ಧ ಕ್ಷೇತ್ರ ಎನಿಸಿಕೊಂಡರೂ ಅದರ ಮೂಲ ಸ್ವರೂಪದ ವಿಷಯ ಸಾಕಷ್ಟು ಸಂದಿಗ್ಧವೇ ಆಗಿದೆ. ಗೋಕರ್ಣದಲ್ಲಿ ರಾವಣನ ಕೈಯಿಂದ ಶಿವನ ಆತ್ಮಲಿಂಗವು ಸ್ಥಾಪಿತವಾಗಿದೆ ಎಂಬ ಕಥೆ ವಿಖ್ಯಾತವಾಗಿದೆ. ಆದರೆ ನಿಜವಾಗಿಯೂ ಅದು ಅಷ್ಟು ನಿಜವಲ್ಲ. ಗೋಕರ್ಣದ ಬಗ್ಗೆ ಇದರ ಸ್ಥಳ ಮಹಾತ್ಮೆ ಪ್ರಸಿದ್ಧವಿದೆ. ರಾವಣನ ಕಥೆಯೇ ಅದಕ್ಕೆ ಆಧಾರ. ಆದರೆ ರಾವಣನ ಅಧಿಕೃತ ವೃತ್ತಾಂತವು ನಮಗೆ ಸಿಗುವುದು ರಾಮಾಯಣದಲ್ಲಿ, ರಾಮನ ವಿರುದ್ಧ ಖಳನಾಯಕನಾಗಿ. ಆದರೆ ರಾವಣನು ಗೋಕರ್ಣಕ್ಕೆ ಬಂದು ಶಿವಲಿಂಗವನ್ನು ಸ್ಥಾಪಿಸಿದ್ದು ಅಲ್ಲಿ ಉಲ್ಲೇಖವೇ ಇಲ್ಲ. ಅವನ ಇತರ ಅನೇಕ ಕಾರ್ಯವಿವರಗಳು ಬಂದರೂ ರಾವಣನ ಚಾರಿತ್ರಿಕ ಮಹತ್ವದ ಈ ಕಥೆ ಅದೇಕೋ ರಾಮಾಯಣದಲ್ಲಿ ಸ್ಪಷ್ಟವಿಲ್ಲ.

ಸ್ಕಂದ ಪುರಾಣದಲ್ಲಿ ಸಹ್ಯಾದ್ರಿ ಕಾಂಡದಲ್ಲಿ ಶಿವಪುರಾಣದಲ್ಲಿ ಈ ಕಥೆ ಮತ್ತು ಅದರಿಂದ ಉಂಟಾದ ಕ್ಷೇತ್ರ ಮಹಾತ್ಮ್ಯದ ಆಖ್ಯಾಯಿಕೆ ಜನಜನಿತವಾಗಿದೆ. ಇನ್ನು ಗೋಕರ್ಣವು ಶಿವಲಿಂಗದ ಪ್ರಸಿದ್ಧ ಸಿದ್ಧ ಕ್ಷೇತ್ರ ಎಂಬುದು ನಿಜ. ಅಂತೆ ಪ್ರಸಿದ್ಧಿ ಬರಲು ಕಾರಣ ಅನೇಕ ಋಷಿ ಮುನಿಗಳು ಇಲ್ಲಿ ತೀರ್ಥಗಳನ್ನು ಲಿಂಗಗಳನ್ನು ನೆಟ್ಟು(ಸ್ಥಾಪಿಸಿ) ತಪಸ್ಸುಗೈದು ಸಿದ್ಧಿಗಳಿಸಿದ ಕಥೆಗಳಿಂದ ಈ ಕ್ಷೇತ್ರಕ್ಕೆ ಆ ಮಹತ್ವ ಬಂದಂತಿದೆ. ಅದು ಮುಖ್ಯವಾಗಿ ಒಂದು ಸ್ಥಳ ಪುರಾಣ. ಇನ್ನು

## "ಓ ನನ್ನ ಗೋಕರ್ಣ"

ಹಲವು ಪುರಾಣಗಳಲ್ಲಿ ಗೋಕರ್ಣದ ಉಲ್ಲೇಖ ಬಂದಿದ್ದರು ಅದು ಒಂದು ರೀತಿ ಪ್ರಕ್ಷೇಪ. ಹೊರತು ಮೂಲ ಕೃತಿಯ ಭಾಗವಲ್ಲ. ಹಾಗೆ ನೋಡಿದರೆ ಗೋಕರ್ಣದ ಉಲ್ಲೇಖ ಈಚಿನ ಇತಿಹಾಸದಲ್ಲಿ ಒಂದೆರಡು ಕಡೆಗೆ ಕಂಡು ಬರುತ್ತದೆ. ಕಾಳಿದಾಸನ ರಘುವಂಶದಲ್ಲಿ ಶ್ರೀರಾಮನ ಅಜ್ಜ ಅಜಮಹಾರಾಜನ ಹೆಂಡತಿ ಇಂದುಮತಿ ಸಾಯಲಿಕ್ಕೆ ಕಾರಣ ಒಂದು ರೀತಿಯಲ್ಲಿ ಗೋಕರ್ಣವೇ! ನಾರದನು ಗೋಕರ್ಣದಿಂದ ಆಕಾಶ ಮಾರ್ಗವಾಗಿ ತೆರಳುವಾಗ ಅವನ ತಲೆಯ ಮೇಲಿನ ಪ್ರಸಾದದ ಹಾರ ಇಂದುಮತಿಯ ಎದೆ ಮೇಲೆ ಬಿದ್ದು ಆಕೆ ಸಾಯುತ್ತಾಳೆ. ಆದರೆ ಇಲ್ಲಿಯೂ ಅದು ಶಿವನ ಪ್ರಸಾದವೇ? ಎಂಬುದು ಗೊತ್ತಾಗುವದಿಲ್ಲ. ಇದೇ ರೀತಿ ಪಂಪನ ಭಾರತದಲ್ಲಿ ಅರ್ಜುನನು ತೀರ್ಥ ಯಾತ್ರೆಗೆ ಹೊರಟು ಗೋಕರ್ಣಕ್ಕೂ ಬರುತ್ತಾನೆಂದು ಪಂಪನು ವರ್ಣಿಸಿದ್ದಾನೆ. ಅಲ್ಲಿಯೂ ಇಲ್ಲಿ ಆತ್ಮಲಿಂಗ ಇದೇ ಎಂಬ ಸ್ಪಷ್ಟ ಉಕ್ತಿಯಿಲ್ಲ. ಪಂಪನು ಜೈನ ಧರ್ಮಕ್ಕೆ ಸೇರಿದವನು. ಪಂಪನ ಕಾಲದಲ್ಲಿ ಇಲ್ಲಿ ಜೈನ ಧರ್ಮದ ಪ್ರಾಭಲ್ಯವಿದ್ದಿರಬೇಕು. ಆದ್ದರಿಂದಲೇ ಈ ಕನ್ನಡ ಆದಿ ಕವಿಯು ಅರ್ಜುನನನ್ನು ಇಲ್ಲಿಯವರೆಗೆ ತಂದಿರಬೇಕು.

ಅಂದೆಲ್ಲ ಈ ಸೀಮೆಯಲ್ಲಿ ಜೈನರ ಹಿರಿತನವಿತ್ತು. ಕಾಳಿದಾಸನಿಗೂ ಪೂರ್ವದ ಕವಿ ಭಾಸನು ತನ್ನ ನಾಗಾನಂದ ನಾಟಕದ ಕಥಾವಸ್ತುವನ್ನು ಇಲ್ಲಿಂದಲೇ ಆಯ್ದುಕೊಂಡಂತಿದೆ. ಕಥಾ ನಾಯಕನು ಗರುಡನಿಗೆ ಬಲಿಯಾಗಿ ಅವನ ಆಹಾರವಾಗುತ್ತಾನೆ. ಈಗಿನ ಗೋಕರ್ಣದ ಸಮೀಪದ ತೊರ್ಕೆ ಗ್ರಾಮದ ದೇವತೆ ಕೆಂಗುಳ ಪರಮೇಶ್ವರಿ, ಅವಳ ಸಾನಿಧ್ಯದಲ್ಲಿಯೇ 'ಆಹಾರ ಕೂಡಲು' ಎಂಬ ಸ್ಥಾನವಿದೆ. ಅಲ್ಲಿ ಗರುಡನಿಗೆ ಬಲಿಕೊಡುವ ಸಂಪ್ರದಾಯದ ಅವಶೇಷವಿದೆ. ಈ ಜಾಗವೆಲ್ಲ ನಾಗರ ಸ್ಥಾನವಾಗಿತ್ತು. ಈಗಲೂ ಆ ಪ್ರದೇಶಕ್ಕೆ 'ನಾಗರ ಬೈಲು' ಎಂಬ ಹೆಸರಿದೆ. ಹೀಗೆ ಈ ಸೀಮೆ ಜೈನಮತ ಪ್ರಭಾವದ ನಿದರ್ಶನವಾಗಿದೆ.

ಮುಖ್ಯ ಮಾತೆಂದರೆ ರಾವಣನು ಕೈಲಾಸದಿಂದ ಆತ್ಮಲಿಂಗವನ್ನು ತಂದದ್ದು ತನ್ನ ತಾಯಿ ಕೈಕಸಿಯ ಆರಾಧನೆಯ ಪೂಜೆಗಾಗಿ. ಇದಕ್ಕೆ ಆತ ಪಶ್ಚಿಮ ಸಮುದ್ರ ತೀರದಲ್ಲಿ ಬರುವ ಅಗತ್ಯವಿದ್ದಿಲ್ಲ. ಅವನು ಆದಷ್ಟು ಶೀಘ್ರ ತಾಯಿಯ ನೆರವಿಗೆ ಧಾವಿಸಬೇಕಾಗಿತ್ತು. ಇದೇ ರೀತಿ ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗಲೂ ಅದೇ ತ್ವರೆಯಿಂದ ಆತ ಲಂಕೆಯನ್ನು ಸೇರಬೇಕಾಗಿತ್ತು. ಹೀಗೆ ಅತಿ ತ್ವರೆಯಿಂದ ಸ್ವದೇಶವನ್ನು ಸೇರಲು ಧಾವಿಸುವಾಗ ಗೋಕರ್ಣವು ಅವನಿಗೆ ಮಾರ್ಗದಲ್ಲಿ ಅಡ್ಡ ಬರುವದು ಸಾಧ್ಯವಿಲ್ಲ. ಗೋಕರ್ಣದ ಮೇಲಿಂದ ನೇರವಾಗಿ ಹೋದರೆ ಆತನು ಆಫ್ರಿಕೆಯ ಪೂರ್ವ ದಂಡೆಯ ಸಮೀಪವಿದ್ದ ಮಡಗಾಸ್ಕರ್ ದ್ವೀಪವನ್ನು ಸೇರಬಹುದಿತ್ತೇ ಹೊರತು ಲಂಕೆಯನ್ನು ಅಲ್ಲ! ಈ ಎರಡು ಉದಾಹರಣೆಗಳ ಮೇಲಿಂದ ರಾವಣನು ಕೈಲಾಸದ ಆತ್ಮಲಿಂಗವನ್ನು ಹೊತ್ತುಕೊಂಡು ಲಂಕೆಗೆ ಮರಳುವ ಹಾದಿಯಲ್ಲಿ ಗೋಕರ್ಣವನ್ನು ತಲುಪುವ ಪ್ರಮೇಯ ಸೋಜಿಗವೇ

ಹಾಗೆಯೇ ಆದಿ ಶಂಕರಾಚಾರ್ಯರು ತಮ್ಮ ಸಂಚಾರದಲ್ಲಿ ಗೋಕರ್ಣಕ್ಕೆ ಬಂದಾಗ ಆತ್ಮಲಿಂಗವನ್ನು ಸಂದರ್ಶಿಸಿದರು ಎಂಬ ಮಾತು ಅವರ ಚರಿತ್ರದಿಂದ ಸ್ಪಷ್ಟವಾಗುವುದಿಲ್ಲ. ಯಾಕೆಂದರೆ ಇಂಥ ಒಂದು ಅದ್ಭುತ ಲಿಂಗವನ್ನು ಕಂಡು ಪೂಜಿಸಿದ ಭಗವತ್ಪಾದರು ಈ ಕುರಿತು ಒಂದು ಸ್ತೋತ್ರವನ್ನು ಬರೆದಿಲ್ಲ. ಅವರು ಅನೇಕ ದೇವತೆಗಳ ಕುರಿತು ಸ್ತೋತ್ರಗಳನ್ನು ರಚಿಸಿದ್ದು ಉಂಟು. ಆದರೆ ಗೋಕರ್ಣದ ಮಹಾಬಲೇಶ್ವರನ ಉಲ್ಲೇಖವು ಎಲ್ಲಿಯೂ ಇಲ್ಲ. ಅಂದರೆ ಅವರು ಈ ಶಿವಲಿಂಗವನ್ನು ಕಂಡಿರಲಿಕ್ಕಿಲ್ಲ. ಹೀಗೆ ಅನೇಕ ಊಹಾಪೋಹಗಳಿಗೆ ಈ ಶಿವನ ಆತ್ಮಲಿಂಗ ಸಂಶಯಾತ್ಮಕವಾಗಿದೆ.

ಯಕ್ಷಗಾನದ ರಂಗಭೂಮಿಯಲ್ಲಿಯೇ
ನಾಟಕವನ್ನು ರಂಗಕ್ಕೆ
Value for money, for years.